Sri S. PUTTASWAMY.—Will the Government agree with me if I say that the 11 feet in the estimate is from the surface level of the river bed.

Sri D. PARAMESWARAPPA.—Not from the surface level, Sir. It is from the lowest river bed level.

Sri S. PUTTASWAMY.—Will the Government agree with me if I say that the contractor is using not only useful material, he is also using soft rock and excavated material? And if it is brought to the notice of the Government will they take action by enquiring into it?

Sri D. PARAMESWARAPPA.—I do not agree with this view, Sir. The Executive Engineer who is placed in charge of the execution of the project, will approve the material and whatever he approves, the contractors are permitted to use and they cannot use all sorts of materials.

1-30 P.M.

Sri S. PUTTASWAMY.—Has it come to the notice of the Government that consolidation of earthen bund is not done in accordance with the specification? They are not putting sufficient water and the consolidation is not according to density that is required.

Sri D. PARAMESWARAPPA.—Consolidation is done according to specifications and standards. There is a field laboratory which tests the quality of the consolidation. There is quality control.

Damage caused by Fire Accident in some Villages of Sorab and Shikaripur Taluks

715. Sri S. BANGARAPPA (Sorab).—

Will the Minister for Revenue be pleased to state :—

(*a*) whether the Government is aware that on account of the fire-accidents, about 40 houses in Kaisodi village, 15 houses in Kelagundli village, 20 houses in Makoppa village in Sorab Taluk and 30 houses in Malur village in Shikaripur taluk were burnt within a period of about one year past ;

(*b*) the total deaths caused of men and animals of each village ;

(*c*) the total estimated loss in each village ;

(*d*) the help Government has rendered to them ;

(*e*) whether it has come to the notice of Government that under the existing rules much help by way of money and materials cannot be given to them ;

(*f*) if so, the action Government proposes to take in the matter ?

Sri H. V. KOUJALGI (Minister for Revenue).—

(*a*) The details of fire accidents during the past one year in Shikaripur and Sorab Taluks are as below :—

	Name of village	*Date of occurrence*	*No. of houses burnt*
Sorab Taluk			
1.	Kaisodi	20-3-1968	33
2.	Chikkamakoppa	29-3-1968	15
3.	Telagundli	18-5-1968	40
Shikaripur Taluk			
1.	Malur	2-2-1969	38*

*This includes 3 cattle sheds and one Temple shed.

(*b*) There has been no loss of human life in Sorab Taluk but one sheep and two calves in Kaisodi village, four small goats in Chikkamakoppa village and one child and three cattle in Telagundli village have lost their lives. In Maloor village of Shikaripur Taluk one old man has lost his life.

(*c*) The total loss in each village is noted below :—

Sorab Taluk	*Loss in Rs.*
1. Kaisodi	75,141-00
2. Chikkamakoppa	28,288-00
3. Telagundli	61,137-00
Shikaripur Taluk	
1. Maloor	58,448-00

(*d*) The relief sanctioned to the sufferers is noted below :—

	Name of village	*Cash Relief*	*Building Materials*	*Total*
1.	Kaisodi	2,995-00	725-00	3,720-00
2.	Chikkamakoppa	1,340-00	1,075-00	2,415-00
3.	Telagundli	940-00	880-00	1,820-00
4.	Maloor	1,700-00	...	1,700-00

The Taluk Development Board, Shikaripur has also sanctioned Rs. 680 for relief in Maloor village. In addition, clothes, rice and cash collected locally have been distributed among the sufferers in Maloor village.

(*e*) No.

(*f*) Does not arise in view of reply to clause (*e*).

ಶ್ರೀ ಎಸ್. ಬಂಗಾರಪ್ಪ.– (ಈ)ಗೆ ಉತ್ತರವಾಗಿ ಪರಿಹಾರವನ್ನು ನಗದುರೂಪದಲ್ಲಿ ಒಂದನೇ ಇಟಂಗೆ 2,995–00 ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ 2,995 ರೂಪಾಯಿಗಳು ಸರ್ಕಾರದ ಹಣವೋ ಅಥವಾ ಸಾರ್ವಜನಿಕರು ಈ ಹಣವನ್ನು ಒಟ್ಟುಗೂಡಿಸಿ ಸೇರಿಸಿದ್ದೋ ?

† ಶ್ರೀ ಎಚ್. ವಿ. ಕೌಜಲಗಿ.—ಇದು ನಮ್ಮ ಕಾಗದ ಪತ್ರಗಳ ಪ್ರಕಾರ ಸರ್ಕಾರದ್ದು ಎಂದು ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಪುನಃ ಪರಿಶೀಲನೆಮಾಡಬೇಕು. ಈ 2,995 ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿಲ್ಲ. ಒಂದು ಸಂಸಾರಕ್ಕೆ 25 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿಗೆ 33 ಮನೆಗಳಿಗೆ 25 ರೂಪಾಯಿಗಳಂತೆ ಎಷ್ಟು ಆಗುತ್ತದೆ ! ಆದ್ದರಿಂದ ಇದು ತಮ್ಮ ಹಣವಲ್ಲ. ಅದಕ್ಕೋಸ್ಕರವೇ ಒಂದು ಕಮಿಟಿ ರಚನೆಯಾಗಿದೆ. ಆ ಹಣ ಅವರಲ್ಲಿ ಸೇರಿದೆಯಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ತಿಳಿಸಿರುವ ಕಾಗದದ ಪತ್ರದ ಪ್ರಕಾರ ಅಷ್ಟು. ಆದರೂ ಅದನ್ನು ಪರಿಶೀಲನೆಮಾಡುತ್ತೇವೆ. ಸರ್ಕಾರದವರು ಯಾವ ನಿಯಮದ ಪ್ರಕಾರ ಕೊಡುತ್ತಾರೋ ಆ ಒಂದು ನಿಯಮದ ಪ್ರಕಾರ ಕೊಟ್ಟಿದ್ದೇವೆ. ಇದೇ ತರಹ ಪ್ರಶ್ನೆಯನ್ನು ಇನ್ನೂ ಕೆಲವರು ಕೇಳಿದ್ದಾರೆ. ಇಲ್ಲಿ ಏತಕ್ಕೆ ಕಡಿಮೆಕೊಟ್ಟಿದ್ದಾರೆ ಎಂಬುದನ್ನು ವಿಚಾರಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—(ಅ)ಗೆ ಉತ್ತರವಾಗಿ ಷಿಕಾರಿಪುರ ತಾಲ್ಲೂಕಿನ ಮಾಲೂರು ಗ್ರಾಮದಲ್ಲಿ ವೃದ್ಧನೊಬ್ಬನು ಮೃತಪಟ್ಟಿದ್ದಾನೆ. ತೆಲಗುಂಡಲ ಗ್ರಾಮದಲ್ಲಿ ಒಂದು ಮಗು ಹಾಗೂ ಮೂರು ದನಗಳು ಅಸು ನೀಗಿವೆ ಎಂದು ಹೇಳಿವೆ. ಇಂತಹ ಬೆಂಕಿಯ ಅಕಸ್ಮಿಕದಲ್ಲಿ ಅಂತಹವರಿಗೆ ಹಣವನ್ನು ಹೆಚ್ಚಿಗೆ ಕೊಟ್ಟಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈಗಿರುವ ಸರ್ಕಾರದ ನಿಯಮದ ಪ್ರಕಾರ ಯಾರಾದರೂ ನತ್ತರೆ ಅವರಿಗೆ ಏನೂ ಕೊಡುವುದಕ್ಕೆ ನಿಯಮವಿಲ್ಲ. ಏನಾದರೂ ನಷ್ಟವಾಗಿದ್ದರೆ ಅದನ್ನು ಸರ್ಕಾರ ಕೊಡಬೇಕೆಂದು ಕೇಳಿದ್ದೇ ಆದರೆ, ಆಗ ಇಲ್ಲಿ ಏನಾದರೂ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—(ಉ)ಗೆ ಉತ್ತರವಾಗಿ 'ಬಂದಿಲ್ಲ' ವೆಂದು ಹೇಳಿವೆ. ವ್ಯಕ್ತಿಗಳು ಅಕಸ್ಮಿಕವಾಗಿ ನತ್ತು ಹೋದರೆ ಹೆಚ್ಚಿಗೆ ಧನಸಹಾಯ ಕೊಡುವುದಕ್ಕೆ ಅಡಚಣೆ ಇಲ್ಲವೆಂದು ಈಗ ಹೇಳುತ್ತೀರಿ. 25 ರೂಪಾಯಿಗಳನ್ನು ಒಂದು ಸಂಸಾರಕ್ಕೆ ಕೊಡುವುದು ಅತಿ ಕಡಿಮೆ ಎಂದು ಈ ಸದನದಲ್ಲಿ ಅನೇಕ ಸಾರಿ ಹೇಳಿವೆ. 10 ಸಾವಿರ ರೂಪಾಯಿಗಳ ಬೆಲೆ ಬಾಳುವ ಮನೆ ಮತ್ತು 20 ಸಾವಿರ ಬೆಲೆಬಾಳುವಷ್ಟು ಧನಕರುಗಳು ನಷ್ಟವಾಗುವಾಗ ಈಗ ಇವರು ಕೊಡುವ ಧನಸಹಾಯ ಬಿಲ್ಡಿಂಗ್ ಮೆಟೀರಿಯಲ್ಸ್‌ಗೇ ಸಾಕಾಗುವುದಿಲ್ಲ. ಈಗ ಇರತಕ್ಕ ಕಾನೂನಿನಿಂದ ಏನೂ ಪ್ರತಿಫಲ ಜನರಿಗೆ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಹೊಸ ಕಾನೂನನ್ನು ಇದರ ಬಗ್ಗೆ ಜಾರಿಗೆ ತರುತ್ತೀರಾ ?

Sri H. V. KOUJALIGI.—I have already said that the relief is not given to the extent of loss incurred. We have made some standard relief which is applicable to the whole State. As Hon. Member says the relief given is too inadequate. However, the Government will consider it.

ಶ್ರೀ ಮಹದೇವ್ ಜಿ. ಬಣಕಾರ್.—ಅಕಸ್ಮಿಕ ಅಗ್ನಿ ಅಪಘಾತಿಯಿಂದಾಗುವ ನಷ್ಟವನ್ನು ಪೂರೈಸುವುದಕ್ಕೆ ಧನಸಹಾಯ ಕೊಡುವಾಗ ಯಾವ ನೀತಿ ನಿಯಮವನ್ನು ಅನುಸರಿಸುತ್ತೀರಿ ?

ಶ್ರೀ ಎಚ್. ವಿ. ಕೌಜಲಗಿ.—ಆದರೆ ಬಗ್ಗೆ 1967ನೇ ಇಸವಿಯಲ್ಲಿ ಒಂದು ಜಿ.ಓ. ಆಗಿದೆ. ಇಂತಿಷ್ಟು ನಷ್ಟಕ್ಕೆ ಇಂತಿಷ್ಟು ಧನಸಹಾಯ ಕೊಡಬೇಕೆಂದು ನಿಗದಿಮಾಡಿದೆ. ಅದು ಬೇಕಾದರೆ ಈ ಮನೆಯ ಮುಂದೆ ಇಡುತ್ತೇನೆ.

ಶ್ರೀ ಎನ್. ಪಿ. ಚನ್ನೇಗೌಡ.—ಸಾಮಾನ್ಯವಾಗಿ ಬೆಂಕಿ ಅನಾಹುತಗಳು ಆದಾಗ ಮನೆಗಳು ಸುಟ್ಟು ಹೋಗಿರುತ್ತವೆ. ಅವರು ಹಣಕಾಸು ಮತ್ತು ಸಾಮಾನು ವಗೈರೆಗಳನ್ನು ಕಳೆದು ಕೊಂಡಿರುತ್ತಾರೆ. ಆದ್ದರಿಂದ ಸರ್ಕಾರದವರು ಅನಾಹುತಕ್ಕೆ ಒಳಗಾದವರಿಗೆ ಸರ್ಕಾರದವರು ಕೊಡತಕ್ಕಂಥ ಪರಿಹಾರ ಸಾಕಾಗುವುದಿಲ್ಲ. ಆದ್ದರಿಂದ ಸರ್ಕಾರದವರೇ ಅವರಿಗೆ ಹೊಸದಾಗಿ ಮನೆಗಳನ್ನು ಕಟ್ಟಿಸಿಕೊಡುವ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಈ ದೃಷ್ಟಿಯಿಂದ ಸರ್ಕಾರದವರು ಪರಿಹಾರ ಕೊಡುವುದಾದರೆ ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ. ನಷ್ಟವನ್ನು ಪೂರ್ತಿ ತುಂಬಿಕೊಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಎನ್. ಎ. ಚನ್ನೇಗೌಡ.—ಮನೆಗಳನ್ನು ಪೂರ್ತಿ ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಕೆಲವು ಮಟ್ಟಿಗೆ ಸಹಾಯ ಮಾಡುವುದನ್ನು ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ.

Concessions extended to Scheduled Castes Christians

727. Sri S. R. SHANMUGAM (K. G. F.).—

Will the Minister for Social Welfare be pleased to state :—

(*a*) the concessions if any granted to the Scheduled Castes Christians on par with Scheduled Castes Hindus in the Educational Institutions and in Government appointments ;

(*b*) if there is any difference in that behalf whether there is a proposal to remove distinction between the Scheduled Casts Hindus and Scheduled Caste Christians in the matter of education facilities ?

Sri V. L. PATIL (Minister for Social Welfare).—

(*a*) Nil.

(*b*) The question is under examination.

ಶ್ರೀ ಎಸ್. ಆರ್. ಷಣ್ಮುಗಂ.—ಸ್ವಾಮಿ, ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ನೌಕರಿಗಳಲ್ಲಿ ಅನುಸೂಚಿತ ಜಾತಿಯ ಹಿಂದೂಗಳಿಗೆ ನೀಡಿರುವಂತೆಯೇ ಅನುಸೂಚಿತ ಜಾತಿಯ ಕ್ರಿಶ್ಚಿಯನ್ನರಿಗೆ ರಿಯಾಯಿತಿಗಳನ್ನೇನಾದರೂ ನೀಡಿದ್ದಲ್ಲಿ ಅಪಗಳು ಯಾವುವು ಎಂದು ಕೇಳಿದ್ದಕ್ಕೆ ಏನೂ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಹಾಗಾದರೆ ಹಿಂದೆ ಅನುಸೂಚಿತ ಜಾತಿಯ ಹಿಂದೂಗಳಿಗೆ ವಿದ್ಯಾಭ್ಯಾಸ ಕ್ಕಾಗಿ ಮತ್ತು ನೌಕರಿಯಲ್ಲಿ ಯಾವರೀತಿ ಸಹಾಯವನ್ನು ಸರ್ಕಾರದವರು ಕೊಡುತ್ತಿದ್ದರೋ ಅದೇ ರೀತಿಯಲ್ಲಿ ಕ್ರಿಶ್ಚಿಯನ್ ಷೆಡ್ಯೂಲ್ ಕ್ಯಾಸ್ಟಿನವರಿಗೂ ಸಹಾಯವನ್ನು ಕೊಡುವುದಕ್ಕೆ ಏನು ಅಡ್ಡಿ ಇದೆ ?

† ಶ್ರೀ ವಿ. ಎಲ್. ಪಾಟೀಲ್.—ಮೊದಲು ಆ ರೀತಿಯಲ್ಲಿ ಸೌಲಭ್ಯವನ್ನು ಕೊಡುವುದಕ್ಕೆ ಕಾನ್‌ಸ್ಟಿಟ್ಯೂಷನ್‌ನಲ್ಲಿ ಅವಕಾಶ ಇರಲಿಲ್ಲ. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಕ್ರಿಶ್ಚಿಯನ್ ಫೇಡರೇಷನ್ನಿನವರು ಬೇರೆ ಬೇರೆ ಸ್ಟೇಟುಗಳವರು ಆ ರೀತಿ ಕ್ರಿಶ್ಚಿಯನ್ ಷೆಡ್ಯೂಲ್ ಕ್ಯಾಸ್ಟಿನವರಿಗೆ ಸಹಾಯವನ್ನು ಕೊಡುತ್ತಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರು ನಮ್ಮ ರಾಜ್ಯದಲ್ಲಿ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಇದ್ದರಿಂದ ಬೇರೆ ಬೇರೆ ಸ್ಟೇಟುಗಳು ಯಾವರೀತಿಯ ಸೌಲಭ್ಯಗಳನ್ನು ಕ್ರಿಶ್ಚಿಯನ್ ಷೆಡ್ಯೂಲ್ ಕ್ಯಾಸ್ಟಿನವರಿಗೆ ಕೊಟ್ಟಿದ್ದಾರೆ ಎಂಬುದನ್ನು ಸರ್ಕಾರದವರು ತರಿಸಿಕೊಂಡು ಅದನ್ನು ಪರಿಶೀಲನೆ ಮಾಡುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ಷೆಡ್ಯೂಲ್ ಕ್ಯಾಸ್ಟಿನವರು ಕ್ರಿಶ್ಚಿಯನ್ ಆದ ತಕ್ಷಣ ಅವರ ಸ್ಥಿತಿ ಗತಿಗಳು ಏನೂ ಬದಲಾವಣೆಯಾಗುವುದಿಲ್ಲ. ಸಾಮಾನ್ಯವಾಗಿ ಅವರ ಸ್ಥಿತಿಗತಿಗಳು ಹಾಗೆಯೇ ಇರುತ್ತದೆ. ಈ ಒಂದು ದೃಷ್ಟಿಯಿಂದ ಷೆಡ್ಯೂಲ್ ಕ್ಯಾಸ್ಟಿನವರಿಗೆ ಅವರು ಪರಿಶಿಷ್ಟವರ್ಗದಲ್ಲಿದ್ದಾಗ ಏನೊಂದು ಶಿಕ್ಷಣ ಸೌಲಭ್ಯ, ಮತ್ತು ಇತರ ಸರ್ಕಾರದ ನವಲತ್ತುಗಳನ್ನು ಕೊಡುತ್ತಿದ್ದರೋ ಅದೇ ರೀತಿಯಲ್ಲಿ ಷೆಡ್ಯೂಲ್‌ಕ್ಯಾಸ್ಟಿನವರು ಮತಾಂತರ ಹೊಂದಿದಮೇಲೂ ಕೊಡಬೇಕು ಎಂದು